


## ಸಮುದ್ರ ಮಥನ




### ಸಲಹೆ ಅನುಕರಣೀಯ

'ನೆಮ್ಮದಿಯ ಜೀವನ ನಿಮ್ಮದೆ?' ಸಿ.ಆರ್. ಚಂದ್ರಶೇಖರ್ ಅವರು ಸೂಚಿಸಿರುವ ಸಲಹೆಗಳು ಜೀವನದಲ್ಲಿ ಅಳವಡಿಸಿಕೊಳ್ಳುವಂತಿವೆ.

–ವಿಭಾ ಮುರಳೀಧರ್, ತುಮಕೂರು/ ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು/ ಕಾಳೀಹುಂಡಿ ಶಿವಕುಮಾರ್, ಮೈಸೂರು ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ

### ಗಂಡಸಿನ ಚಿತ್ರವೇ ಸರಿ!

ಮುಖಪುಟ ಲೇಖನಕ್ಕೆ ಸಾಗರ ತೀರದ ಉಸುಕಿನಲ್ಲಿ ವ್ಯಕ್ತಿಯನ್ನು ನಿಲ್ಲಿಸಿರುವ ಚಿತ್ರ ಅರ್ಥಗರ್ಭಿತವಾಗಿದೆ. ಅದು ಗಂಡಸಿನ ಚಿತ್ರವೇ ಆಗಿರುವುದರಿಂದ ಸತ್ಯಕ್ಕೆ ಹತ್ತಿರವಾಗಿದೆ. ಯಾಕೆಂದರೆ ಗಂಡಸಿಗೇ ಮಾನಸಿಕ ಚಿಂತೆ ಹೆಚ್ಚು!

ಶತಾಯುಷಿಯ ಶಾದಿ ಒಂದು ವಿಸ್ಮಯ. ಎನ್.ನರಸಿಂಹಯ್ಯನವರ 'ಭಯಂಕರ ಬೈರಾಗಿ' 2–3 ಸಲ ಓದಿದ್ದೆ. ಅವರನ್ನು ನೆನಪಿಸಿಕೊಂಡದ್ದು ಚಲೋ ಆಯಿತು. ಅವರ 'ಕೆರಳಿದ ಕೇಸರಿ' ಬೇಕೆಂದರೆ ಸಿಗುತ್ತಿಲ್ಲ.

–ಬಳ್ಳಾರಿ ಮಧ್ವರಾಜ್, ಬೆಂಗಳೂರು

### ವಿವಾಹ ದೀರ್ಘ ಕಾಲ ಬಾಳಲಿ!

120ರ ಹರೆಯದ(?) ಪುರುಷ, 60ರ ವಧುವನ್ನು 'ಶಾದಿ' ಮಾಡಿಕೊಂಡ ವಿಷಯ ಹಳೆ ನೆನಪೊಂದನ್ನು ಹೊರತಂದಿತು.

1970ರ ದಶಕದಲ್ಲಿ ಹದಿ ಹರೆಯದ ಯುವತಿಯನ್ನು 50 ದಾಟಿದ 'ವರ' ಹಾಗೂ ಆತನ ಸಂಬಂಧಿಕರು ವಿಕ್ಟೋರಿಯಾ ಆಸ್ಪತ್ರೆಗೆ ಕರೆತಂದಿದ್ದರು. ಸೀಮೆಎಣ್ಣೆ ಕುಡಿದಿದ್ದೇನೆಂದು ಅವರನ್ನೆಲ್ಲ ನಂಬಿಸಿದ್ದ ಯುವತಿ, ತಾನು ಬಟ್ಟೆ ಮೇಲೆ ಮಾತ್ರ ಅದನ್ನು ಚೆಲ್ಲಿಕೊಂಡಿರುವುದಾಗಿ ನನಗೆ ಗುಟ್ಟಾಗಿ ತಿಳಿಸಿದಳು. ಅವಳು ಅಂಗಲಾಚಿದ ಕಾರಣ ಒಂದು ದಿನ ಆಸ್ಪತ್ರೆಗೆ ದಾಖಲಿಸಿ ರಕ್ಷಿಸಿದ್ದಾಯಿತು. ಬಿಡುಗಡೆಯಾದ ಬಳಿಕ ಅವಳ 'ಶಾದಿ'ಯಾಯಿತೋ... 'ಬರ್ಬಾದಿ'ಯಾಯಿತೋ... ತಿಳಿಯಲಿಲ್ಲ.

ವಂಡರ್‌ಪುಟದ ವಿವಾಹ ದೀರ್ಘ ಕಾಲ ಉಳಿಯಲಿ!

–ಡಾ.ಕೆ.ಕೆ.ಚಂದ್ರಹಾಸ ಗುಪ್ತ, ಹಾಸನ

### ಈ ವಯಸ್ಸಿನಲ್ಲಿ ಮದುವೆಯೇ?

ವಂಡರ್ ಪುಟದಲ್ಲಿ ವಿದ್ಯಾ ಹಾಲಭಾವಿಯವರ ಚಿತ್ರ–ಬರಹ ಶತಾಯುಷಿಯ ಶಾದಿ ವಿಸ್ಮಯ ತಂದಿತು. ನಮ್ಮಂತಹ ಇಳಿ ವಯಸ್ಸಿನವರೂ ಮತ್ತೆ ಮದುವೆ ಬಗ್ಗೆ ಯೋಚಿಸುವಂತಾಯಿತು!

–ಬಿ.ಎಸ್.ಮುಳ್ಳೂರ, ಹಲಗತ್ತಿ

### ಸುಖೀಭವ ಓದಲು ಮುಜುಗರ

'ಸುಧಾ' ಪತ್ರಿಕೆ ಹುಟ್ಟಿದ ದಿನದಿಂದ ನಾನು ಅದರ ನಿರಂತರ ಓದುಗ. ಆದರೆ 'ಸುಖೀಭವ' ಅಂಕಣ ಆರಂಭವಾದಾಗಿನಿಂದ ಓದಲು ಮುಜುಗರವಾಗುತ್ತಿದೆ.

–ಪಿ.ವಿ.ರಮೇಶ್, ಚಿತ್ರದುರ್ಗ

### 'ಕಲಾವಿದ' ಉತ್ತಮ ಕಥೆ

ಕಲಾವಿದರ ತವರೂರು ಎಂದು ಹೆಸರಾದ ಮರಿಯಮ್ಮನಹಳ್ಳಿಯ ಪರಿಸರದ ಹಿನ್ನೆಲೆಯಲ್ಲಿ ಚಿತ್ರಿಸಿದ ವಿದ್ಯಾಶಂಕರ ಹರಪನಹಳ್ಳಿಯವರ 'ಕಲಾವಿದ' ಕಥೆ ತುಂಬಾ ಚೆನ್ನಾಗಿತ್ತು.

ಬಿ.ಮಂಜಮ್ಮ ಜೋಗತಿ, ಮರಿಯಮ್ಮನಹಳ್ಳಿ/ ಎಲ್.ಸ್ವರ್ಣಲತಾ, ಹುಬ್ಬಳ್ಳಿ/ ಶರಬಮ್ಮ, ಕೆ.ಚೈತ್ರಾ, ಸಿದ್ದು, ವಿಜಯಾ, ರಾಯಚೂರು

### ಅಭಿನಯ ನಿಲ್ಲಿಸಬಾರದಿತ್ತು

'ಕಲಾವಿದ' ಕಥೆಯಲ್ಲಿ ರಾಘಣ್ಣ ಪಾತ್ರ ಮಾಡುವುದನ್ನು ನಿಲ್ಲಿಸಿದ್ದು ಬೇಸರವೆನಿಸಿತು. ಬರೀ ಬುದ್ಧನ ಪಾತ್ರವನ್ನೇ ಮಾಡುತ್ತ ಕಲಾವಿದನಾಗಿ ಉಳಿದಿದ್ದರೆ ಕಥೆಯ ಅಂತ್ಯ ಉತ್ತಮವೆನಿಸುತ್ತಿತ್ತು.

–ರಾಘವೇಂದ್ರರಾವ್ ಕಲಾಲ್, ಬಿ.ಗಣೇಕಲ್ (ರಾಯಚೂರು ಜಿಲ್ಲೆ)

### ವಾಮನನ ತ್ರಿವಿಕ್ರಮನ ಸಾಧನೆ

ವಾಮನಮೂರ್ತಿ ಪತ್ತೇದಾರಿ ಕಾದಂಬರಿಕಾರ ಎನ್.ನರಸಿಂಹಯ್ಯ ಅವರ ತ್ರಿವಿಕ್ರಮ ಸಾಧನೆಯನ್ನು ಗುಡಿಹಳ್ಳಿ ನಾಗರಾಜ ಚಿಕ್ಕ ಬರಹದಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ.

–ನ.ಅ.ರಾವ್, ಪಿ.ಎನ್.ಶ್ರೀವತ್ಸ, ಬೆಂಗಳೂರು/ ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ಎಚ್.ಆನಂದ ಕುಮಾರ್, ಚಿತ್ರದುರ್ಗ/ ಹಾಡ್ಯ ಬಿ.ಜಯಾನಂದ, ಮೈಸೂರು